## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 264/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಸಂತೋಷ್.ಸಿ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಚೆಲುವರಾಜು | | **20.09.2024** |
| **ವಯಸ್ಸು** | ಃ 33 ವರ್ಷ | | |
| **ವೃತ್ತಿ** | ಃ ಆಟೋ ಚಾಲಕ | **ಪ್ರಾ.ಸಾ.** | ಃ 05 |
| **ವಾಸಸ್ಥಳ** | ಃ ಕೆ.ಆರ್.ಎಸ್ | **ಚಾ.ಸಾ.** | ಃ 06 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಆಟೋ ಓಡಿಸುವ ಕೆಲಸ ಮಾಡುತ್ತೇನೆ. ಚಾ.ಸಾ–*1* ಗೀತಾ ಮತ್ತು ಅವರ ಮಗಳು ಹರ್ಷಿತಾ ಇವರು ನನ್ನ ಆಟೋದಲ್ಲಿ ಪ್ರಯಾಣ ಮಾಡುತ್ತಿದ್ದರಿಂದ ನನಗೆ ಅವರ ಪರಿಚಯು ಇದೆ. ಈಗ ಅಂದಾಜು *1* ವರ್ಷದ ಹಿಂದೆ ಒಂದು ದಿನ ಚಾ.ಸಾ-*1* ಗೀತಾ ಇವರು ಬೆಳಗ್ಗೆ *6.30* ಕ್ಕೆ ಕರೆ ಮಾಡಿ ಬಾಡಿಗೆಗೆ ಬರುವಂತೆಹೇಳಿದ್ದರಿಂದ ನಾನು ಅವರ ಮನೆ ಬಳಿ ಹೋಗಿದ್ದೆ ನಂತರ ಗೀತಾ ಇವರನ್ನು ಕರೆದುಕೊಂಡು ಬಟ್ಟೆ ತೋಳೆಯಲು ಪಂಪ್ ಹೌಸ್ ಬಳಿ ಇರುವ ಕಾಲುವೆ ಬಳಿ ಹೋಗಿದ್ದೆ. ನಂತರ *9.30* ಕ್ಕೆ ವಾಪಸ್ಸು ಅವರನ್ನು ಕುಂಬಾರ ಕೊಪ್ಪಲಿನ ಅವರ ಮನೆಗೆ ಬಿಟ್ಟು ವಾಪಸ್ಸು ಹೋಗಿದ್ದೆ. ನಂತರ *10–10.30* ರ ವೇಳೆಯಲ್ಲಿ ಗೀತಾ ಇವರ ಮಗಳು ಹರ್ಷಿತಾ ಇವರು ನನಗೆ ಫೋನ್ ಮಾಡಿ ಬಟ್ಟೆ ಒಣಗಿ ಹಾಕಲು ಹಗ್ಗ ಬೇಕು ಎಂದು ಕೇಳಿದ್ದರು ಆಗ ನಾನು ಹಗ್ಗ ತೆಗೆದುಕೊಂಡು ಅವರ ಮನೆ ಬಳಿ ಹೋದಾಗ ಹರ್ಷಿತಾ ಇವರ ಗಂಡ ಸಹ ಅಲ್ಲಿಯೇ ಇದ್ದರು. ಆಗ ಹರ್ಷಿತಾ ನನಗೆ ಟೀ ಕೊಟ್ಟು ಬಟ್ಟೆ ಒಣಗಿ ಹಾಕಲು ಹೋಗಿದ್ದರು. ಆ ಕಾಲಕ್ಕೆ ನಾನು ಮತ್ತು ಅಭಿಮನ್ಯು

ಮನೆಯಲ್ಲಿದ್ದಾಗ ಮನೆಯ ಹೊರಗಡೆ ಕಿರುಚುವ ಶಬ್ದ ಕೇಳಿ ನಾನು ಮನೆಯಿಂದ ಹೊರಗಡೆ ಬಂದಿದ್ದೆ. ಆಗ ಹರ್ಷಿತಾಳ ಗಂಡ ಮಾದೇಶ ಚಾಕುವಿನಿಂದ ಹರ್ಷಿತಾಳಿಗೆ ಚುಚ್ಚಿದ್ದ ಆಗ ಹರ್ಷಿತಾಳ ತಾಯಿ ಗೀತಾ ಇವರು ಚಾಕುವನ್ನು ಕಿತ್ತುಕೊಳ್ಳಲು ಪ್ರಯತ್ನ ಮಾಡಿದ್ದರು. ಆಗ ಅವರ ಕೈಗೂ ಸಹ ಗಾಯವಾಗಿತ್ತು. ಆಗ ನಾನು ಮತ್ತು ಅಭಿಮನ್ಯು ಗಲಾಟೆ ಬಿಡಿಸಿ ಹರ್ಷಿತಾಳನ್ನು ಅವರ ತಾಯಿ ಜೊತೆ ಆಟೋದಲ್ಲಿ ಆಸ್ಪತ್ರೆಗೆ ಕಳುಹಿಸಿದ್ದೆವು. ಅವರು ಜಿಲ್ಲಾ ಆಸ್ಪತ್ರೆಗೆ ಹೋಗಿ ತೋರಿಸಿದಾಗ ಅವರು ಕೆ.ಆರ್.ಆಸ್ಪತ್ರೆಗೆ ಕಳುಹಿಸಿದ್ದರು. ಆಗ ಕೆ.ಆರ್.ಆಸ್ಪತ್ರೆಗೆ ಹೋದಾಗ ಹರ್ಷಿತಾ ಮರಣಹೊಂದಿದ್ದಾಳೆ ಎಂದು ತಿಳಿಸಿದ್ದರು. ಹರ್ಷಿತಾಳ ಗಂಡ ಹರ್ಷಿತಾಳನ್ನು ತನೊಂದಿಗೆ ಬಾ ಎಂದು ಕರೆದಾಗ ಹರ್ಷಿತಾ ನಿನ್ನ ತಂದೆ ತಾಯಿಯನ್ನು ಕರೆದುಕೊಂಡು ಬಾ ಎಂದು ಹೇಳಿದಾಗ ಹರ್ಷಿತಾಳ ಗಂಡ ಆ ರೀತಿ ಚಾಕುವಿನಿಂದ ಹಲ್ಲೆ ಮಾಡಿದ್ದ. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಕೋರ್ಟ್ ಮುಂದೆ ಇರುವ ಆರೋಪಿತನೇ ಹರ್ಷಿತಾಳ ಗಂಡ ಮಾದೇಶ ಇರುತ್ತಾನೆ. ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಎಂ.ಒ-*1* ಚಾಕು ಅದೇ ಇರುತ್ತದೆ. ಈ ಬಗ್ಗೆ ಕೋರ್ಟ್ ನಲ್ಲೂ ಸಹ ಹೇಳಿಕೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ಹೇಳಿಕೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಹೇಳಿಕೆಯನ್ನು ನಿ.ಪಿ-*14* ಮತ್ತು ಸಹಿಯನ್ನು ನಿ.ಪಿ-*14*(ಎ) ಎಂದು ಗುರುತಿಸಿದೆ.

<u>ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*